ಶ್ರೀ ವಿ. ಆರ್. ನಾಯ್ಡು.—1946 ನೆಯ ಇಸವಿಯಿಂದ 1952ರ ವರೆಗೆ ಅಂಕಿ ಅಂಶಗಳನ್ನು ನೋಡಿದರೆ ಸುಮಾರು ಎರಡೂವರೆ ಲಕ್ಷ ರೂಪಾಯಿಗಳು ಖರ್ಚಾಗಿವೆ. ಸುಧಾರಣೆ ಮಾಡಿದ ಭಿಕ್ಷುಕರ ಸಂಖ್ಯೆ 612 ಎಂದಿದೆ. ಅವರು ಯಾರು, ಯಾವರೀತಿ ಸುಧಾರಣೆ ಮಾಡಿದ್ದೀರಿ ಎಂಬುದು ಇದರಿಂದ ಗೊತ್ತಾಗುವುದಿಲ್ಲ. ಈ 612 ಜನರಿಗೆ ಎರಡೂವರೆ ಲಕ್ಷ ರೂಪಾಯಿ ಖರ್ಚಾಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಖರ್ಚಾಗಿದೆ.

ಶ್ರೀ ವಿ. ಆರ್. ನಾಯ್ಡು.—ಕೇವಲ 612 ಜನರಿಗಾಗಿ ಎರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿರುವುದು ಬಹಳ ಅನ್ಯಾಯವಲ್ಲವೆ?

Sri Kadidal MANJAPPA.—It is a matter of opinion.

ಶ್ರೀ ವಿ. ಆರ್. ನಾಯ್ಡು.—ಈ ಭಿಕ್ಷುಕರ ಕಾಲೊನಿಗಾಗಿ ಇಷ್ಟೊಂದು ಹಣ ಅನ್ಯಾಯವಾಗಿ ಖರ್ಚಾಗುತ್ತಿರುವುದರಿಂದ ಇದನ್ನು ಆದಷ್ಟು ಬೇಗ ವಜಾಮಾಡುವುದು ಉತ್ತಮವಲ್ಲವೆ?

Mr. SPEAKER.—All that has been answered yesterday.

Extent of loss of Paddy and Ragi crops in Shimoga Taluk

Q.—449 **Sri S. R. NAGAPPA SETTY** (Shimoga).—

Will the Government be pleased to state :—

(*a*) the number of acres of paddy and ragi crops lost due to failure of rains in Shimoga Taluk;

(*b*) what relief has been granted to these raiyats ?

A.—**Sri Kadidal MANJAPPA** (Minister for Revenue and Public Works).—

(*a*) An extent of about 10,000 acres of paddy is reported to have been adversely affected. The precise extent of loss cannot yet be ascertained as the season is not over. No loss of ragi crop is reported.

(*b*) Seasonal remissions wherever necessary will be sanctioned under the rules.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಹೋದ ತಿಂಗಳು, ಮಳೆಬರುವುದಕ್ಕೆ ಮುಂಚೆ ಪೈರು ಒಣಗಿತೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ ಒಣಗಿತ್ತು.

ಶ್ರೀ ಎಸ್ ಆರ್. ನಾಗಪ್ಪ ಶೆಟ್ಟಿ.—ಸುಮಾರು ಹತ್ತು ಸಾವಿರ ಎಕರೆ ಬೆಳೆ ಹೋಗಿತ್ತೆಂದು ಹೇಳಿದೆ. ಇದರಿಂದ ಎಷ್ಟು ಪ್ರಜಾ ಸಂಖ್ಯೆಗೆ ತೊಂದರೆಯಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳನ್ನೆಲ್ಲಾ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಪೈರು ಹೋಗಿರುವ ಸ್ಥಳಗಳಲ್ಲಿರುವ ಪ್ರಜೆಗಳಿಗೆ ಮುಂದಿನ ವರ್ಷ ಆಹಾರ ಸರಬರಾಯಿಮಾಡಲು ಏರ್ಪಾಡುಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಕಡೆಯೂ ಮಾಡಿದ ಹಾಗೆ ಅಲ್ಲಿಯೂ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಡೀಕಂಟ್ರೋಲ್‌ಮಾಡಿದ ಮೇಲೆ ಅಂಥ ಹಳ್ಳಿಗಳಿಗೆ ಸರಬರಾಯಿಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಅಲ್ಲಿಯ ಜನರಿಗೆ ಏನಾದರೂ ಕೆಲಸಗಳನ್ನೊದಗಿಸಲು ಪ್ರಯತ್ನಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತುಂಗಾ ಆಣೆಕಟ್ಟಿನ ಕೆಲಸ ನಡೆಯುತ್ತಿದೆ, ಎಷ್ಟು ಜನರನ್ನಾದರೂ ಅಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ.

Raising the bund of Sankighatta Tank in Magadi Taluk

Q.—486. **Sri S. SIDDAPPA** (Magadi).—

Will the Government be pleased to state :—

whether they intend to raise the bund of Sankighatta Tank in Magadi Taluk ?

A.—Sri Kadidal MANJAPPA (Minister for Revenue and Public Works).—Yes.

ಶ್ರೀ ಎಸ್. ಸಿದ್ದಪ್ಪ.— ಗಮನದಲ್ಲಿದೆ ಎಂದು ಉತ್ತರದಲ್ಲಿ ತಿಳಿಸಿದೆ. ಎಷ್ಟು ದಿವಸದಿಂದ ಗಮನದಲ್ಲಿದೆ ; ಕೆಲಸವನ್ನು ಯಾವಾಗ ತೆಗೆದುಕೊಳ್ಳುವುದು ?

Sri Kadidal MANJAPPA—The work will be taken up after the estimate is sanctioned.

ಶ್ರೀ ಎಸ್. ಸಿದ್ದಪ್ಪ.—ಯಾವ ಸ್ಟೇಜಿನಲ್ಲಿದೆ ಅಂದಾಜು? ಕಾರ್ಯರೂಪಕ್ಕೆ ಯಾವಾಗ ಬರುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಾಜೆಕ್ಟನ್ನು ಪುನರ್ವಿಮರ್ಶೆಮಾಡುತ್ತಿದ್ದೇವೆ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ಎಷ್ಟು ದಿವಸದಲ್ಲಿ ಕಾರ್ಯರೂಪಕ್ಕೆತಂದು ಅಲ್ಲಿನ ಜನರಿಗೆ ಅನುಕೂಲ ಕಲ್ಪಿಸುವುದಕ್ಕೆ ಸಾಧ್ಯ ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆಮಾಡಬೇಕೆಂದು ಇಚ್ಛೆ.

ಶ್ರೀ ಎಸ್. ಸಿದ್ದಪ್ಪ.—ಇದು ಸುಮಾರು ಹತ್ತು ವರ್ಷಗಳ ಕಾಲದಿಂದ ಸರ್ಕಾರದ ಮುಂದಿದೆಯಲ್ಲವೆ ?

ಅಧ್ಯಕ್ಷರು.—ಎತ್ತರ ಮಾಡಬೇಕೆಂಬ ಅಪೇಕ್ಷೆ ಇದೆ ಎಂದು ಹೇಳಿದ್ದಾರೆ ; ಮಾನ್ಯಸದಸ್ಯರು ಪ್ರಶ್ನೆ ಕೇಳಿಕೇಳಿ, ಅದನ್ನು ಮಾಡುವುದು ಬೇಡ ಎನ್ನಿಸುತ್ತಾರೆಂದು ಕಾಣುತ್ತದೆ. (ನಗು!)

SHORT NOTICE QUESTION AND ANSWER.

Prohibiting beating of *tom-tom* at Devar Jeevanahalli, Bangalore North Taluk.

Q.—1. Sri P. M. SWAMIDORAI (Kolar Gold Fields—Scheduled Castes).—

Will the Government be pleased to state :—

(*a*) whether the beating of tom-tom, melam, was discontinued by the Scheduled Caste in Devar Jeevanahalli, Bangalore North Taluk, for a number of years ;

(*b*) whether it was resumed by compulsion by the caste Hindus on the occasion of a festival on 9th October 1952 ;

(*c*) whether it has not wounded the feelings of the Scheduled Caste ;

(*d*) whether the Police has given an escort to the members who beat the tom-tom as a breach of peace was anticipated ;

(*e*) whether they intend to prohibit the beating of tom-tom in the future ;

(*j*) whether there was any representation from the Scheduled Caste, particularly at Devar Jeevanahalli, to prohibit the beating of tom-tom ?

A.—Sri H. SIDDAVEERAPPA (Minister for Home Affairs and Agriculture).—

(*a*) This practice is in vogue from time immemorial. It had not been discontinued at any time.

(*b*) No. It was voluntarily done.

(*c*) This is a matter of opinion.

(*d*) No escort was given to those who beat the tom-tom. Tbe Police were there to maintain law and Order as a precautionary measure in connection with the Maramma procession.

(*e*) No.

(*f*) Yes.

Sri P. M. SWAMIDORAI.—Is it not a fact that the Maramma procession which was scheduled to take place on 2nd October 1952 was stopped by the Police on account of the agitation against beating of tom-tom ?

Sri H. SIDDAVEERAPPA.—Government have no information.

Sri P. M. SWAMIDORAI.—Was license granted for the procession ?

Sri H. SIDDAVEERAPPA.—Yes, Sir.

Sri P. M. SWAMIDORAI.—There was a representation to prohibit tom-tom. Under such circumstances was it right on the part of Government to have granted the licence ?